ತಂಟೆ ಮಾಡದೇ ಕಾಳು ಹೆಕ್ಕುವ ಕೋಳಿ
ಒಂದೇಟಿಗೆ ವಿಲ ವಿಲ ಒದ್ದಾಡುವ ಕೆರೆ ಹಾವು
ಭಾರ ಹೊತ್ತೇ ಕುಸಿದು ಬೀಳುವ ಕತ್ತೆ
ಸಣ್ಣ ಸದ್ದಿಗೂ ಜಿಗಿದು ಓಡುವ ಮೊಲ–
ಕಾಪಾಡಿಕೊಂಡಿವೆ ತ್ರಾಣ

ದಾರಿಯಲಿ ಬರುವಾಗ ಚಿಟಿಕೆ ಸದ್ದಿಗೆ
ಗರಿ ಬಿಚ್ಚಿ ಕುಣಿಯಲು ತೊಡಗಿದ
ನವಿಲನ್ನು ಕಂಡೆ

ಜಿಂಕೆ–ಹಂಸ ಸೌಂದರ್ಯಕ್ಕಾಗಿ
ತುರು–ಪಾರಿವಾಳ ರಾಜಕೀಯಕ್ಕಾಗಿ–
ಉಳಿಸಿಕೊಳ್ಳಲಾಗಿವೆಯಂತೆ

ನೂರ್ಮಾಳಿಲ್ಲದ ಆ ಸಂಜೆ
ಹೊತ್ತು ಹೋಗುತ್ತಿಲ್ಲ ಎಂದು
ಹತ್ತಿರದ ಝೂಗೆ ವಿಹಾರಕ್ಕೆ ಹೋದೆ

ಅಲ್ಲಿ ಆನೆ ಗೂಬೆಯ ಹಾಗೆ ಕುಳಿತಿತ್ತು
ಹದ್ದು ಮದ್ದು ಕುಡಿದಂತಿತ್ತು

ಹಲ್ಲಿಯಂತೆ ಕುಳಿತ ನಿಶ್ಚಲ ಹುಲಿಯೊಂದು
ನನ್ನ ಗಮನ ಸೆಳೆಯಿತು

ಈ ಹುಲಿಯ ಮೊಗದ ಮೇಲೆ
ನನ್ನ ನೂರ್ಮಾಳ ಕಳೆಯಿದೆ
ಆ ನಡಿಗೆ, ಆ ಗತ್ತೂ–
ಆಕೆಯದೇ!

ಹತ್ತಿರ ಹೋದರೆ ಕಣ್ಣಲ್ಲಿ ಕಣ್ಣಿಟ್ಟಿದೆ
ಇವಳ ಮಸೂರದಲಿ ಅವಳ ದಿಟ್ಟಿ
ಸಸಾರವೇ ತಪ್ಪಿಸುವುದು ಈ ಈಟಿ?

ಈ ಕಾವ್ಯ ರೂಪಕದ ಪಯಣ ಮುಂದಿನ
ಸಂಚಿಕೆಯಲ್ಲಿ ಮತ್ತೊಬ್ಬ ಕವಿಯೊಂದಿಗೆ
ಮುಂದುವರೆಯುವುದು.

